“ಕರ್ಣ ಸೂರ್ಯಪುತ್ರನಾದರೂ ಸೂತಪುತ್ರನೆನಿಸಿದ. ವಿದುರ ದಾಸಿಪುತ್ರ... ಹುಟ್ಟಿನ ಮೂಲಕ್ಕಿಂತ ಅವರು ಬೆಳೆದದ್ದನ್ನ... ಬೆಳಗಿದ್ದನ್ನ ನೋಡಬೇಕು. ಹುಟ್ಟೊಂದ ಮುಖ್ಯ ಆಗೂದುಲ್ಲ...” ಎಂದು ಆಚಾರ್ರು ವರ್ಣಿಸುತ್ತಿದ್ದರು. ಪುರಾಣದಲ್ಲಿ ತಲ್ಲೀನರಾಗಿ ಬತ್ತಿ ಹೊಸೆಯುತ್ತಿದ್ದ ಭಾಗಕ್ಕನಿಗೆ ಮೊಮ್ಮಗ ಸಮೀರ ಹಿಂದಿನಿಂದ ಬಂದು, “ಅಜ್ಜಿ... ಕೊಣ್ಣೂರಿಂದ ನಿಂಗಪ್ಪ ಬಂದಾನ. ಬರಬೇಕಂತ...” ಎಂದು ಮೆತ್ತಗೆ ಕಿವಿಯಲ್ಲಿ ಪಿಸುಗುಟ್ಟಿದಾಗ ರಸಭಂಗವಾಯಿತು. ಆದರೂ ಮಂದಹಾಸ ತೇಲಿಸುತ್ತ ಎದ್ದರು. ‘ಕಾಳುಕಡಿ ತಂದಿರ್ತಾನ...’ ಎನಿಸಿದರೂ ಮನದಲ್ಲಿ ನೋವು ಜಿನುಗಿತು. ಚಿನ್ನದಂಥ ಭೂಮಿಯನ್ನು ಮಾರಿ ಬಂದು ಅವನು ತರುವ ಮುಷ್ಟಿ ಕಾಳಿಗೆ ಆಸೆಪಡುತ್ತಿರುವುದಕ್ಕೆ ಬೇಸರಗೊಳ್ಳುತ್ತಲೇ ಮನೆ ಸೇರಿದರು.

ಆಗಲೇ ಅಕ್ಕಿ ಮತ್ತು ಸಕ್ಕರೆಯ ಮೂಟೆಗಳು, ಬೆಲ್ಲದ ಪೆಂಟಿ, ಕಾಳು, ತರಕಾರಿಗಳನ್ನು ಮೂಲೆಯಲ್ಲಿ ಪೇರಿಸಿಡಲಾಗಿತ್ತು. ಕಳೆದ ಬಾರಿಗಿಂತ ಮೂಟೆಗಳು ಚಿಕ್ಕವಾಗಿದ್ದವು. ಗಮನಿಸಿದ ಭಾಗಕ್ಕ ನಿಟ್ಟುಸಿರಿಟ್ಟು, “ಹೆಂಗಿದ್ದೀ ನಿಂಗಣ್ಣಾ? ಮಕ್ಕಳು ಮರಿ ಆರಾಮಿದ್ದಾರಿಲ್ಲೋ? ಮಳಿ ಹ್ಯಾಂಗದ?” ಎಂಬೆಲ್ಲ ಪ್ರಶ್ನೆಗಳನ್ನು ಒಟ್ಟಿಗೆ ಕೇಳಿದರು. ಅವನೂ ಮುಖ ಅರಳಿಸುತ್ತ, “ಎಲ್ಲಾ ಆರಾಮ ಐತ್ರಿ. ಮಳೀದ ತ್ರಾಸ ನೋಡ್ರಿ. ಬೇಕಾದಾಗ... ಬಿತ್ತಿದಾಗ ಬರಾಣೆಲ್ಲಾ. ಆಮ್ಯಾಕ ಸುರೀತೇತ್ರಿ. ಬೆಳಿ ಎಲ್ಲಾ ಹಾಳಾಗಿ ಹೋಕ್ಕೇತಿ” ಎಂದು ಅಲವತ್ತುಕೊಂಡ. ಪದ್ಮ ಬಿಸಿಯಾಗಿ ಭಕ್ಕರಿ (ಜೋಳದ ರೊಟ್ಟಿ) ಮಾಡಿ ಊಟಕ್ಕೆ ಬಡಿಸಿದಳು. ಊಟದ ಜೊತೆ ಸುದ್ದಿಗಳೂ ನಡೆದವು. “ಎರಡು ದಿವ್ಸ ನಿಂತು ಹೋಗು” ಎಂದು ಹೇಳಿದಾಗ, “ಇಲ್ಲರಿ... ಭರಮಪ್ಪನ ಗಾಡ್ಯಾಗ ಸಾಮಾನು ಹಾಕ್ಕೊಂಡ ಬಂದೇನಿ. ಅದರಾಗ ತಿರಗಿ ಮನಿ ಮುಟಗೋತೇನಿ” ಎಂದವ ಮೊದಲಿಗಿಂತ ಹಣ್ಣಾಗಿದ್ದ. ಭಾಗಕ್ಕನ ಸನ್ನೆಯನ್ನರಿತ ಪದ್ಮ ಒಂದಷ್ಟು ಅವಲಕ್ಕಿ, ಉಂಡಿ, ಚಕ್ಕುಲಿ ಕಟ್ಟಿ, ‘‘ಮಕ್ಕಳಿಗೆ ಕೊಡು” ಎಂದು ಕೈಗಿತ್ತಳು. ಕೃಷ್ಣ ಟಿಳಕಚೌಕದವರೆಗೂ ಕಳಿಸಿ ಬಂದ.

ಪದ್ಮ, “ಅತ್ತೆವರ... ಮಾಡೋಕ್ಕೈಲೆ ಎರಡು ದಶಮಿ ಮಾಡ್ತೇನಿ. ಬಿಸೀವ ತಿಂದ ಬಿಡ್ರಿ” ಎಂದಳು. ಕ್ಷಣ ಅನುಮಾನಿಸಿದವರು ತಲೆಯಾಡಿಸಿ ಕೈಕಾಲು ತೊಳೆದು ಬಂದರು. “ಕಿಟ್ಟಿ... ವಾಸಣ್ಣನ ಶ್ರಾದ್ಧ ಎಂದ ಬರ್ತದ ನೋಡಿಯೇನು?” ಎಂದು ಕೇಳಿದರು. ಕೃಷ್ಣ, “ಹ್ಞೂಂ. ಬರೋ ಬುಧವಾರನ ಅದ. ಆಚಾರ್ರಿಗೆ ಹೇಳೇನಿ. ಹನ್ನೆರಡಕ್ಕ ಬರ್ತಾರಂತ” ಎಂದ. ಪದ್ಮಳಿಗೆ ಇರಿಸು ಮುರಿಸು. ಇನ್ನಷ್ಟು ಜೋರಾಗಿ ಸಿಟ್ಟನ್ನು ಭಕ್ಕರಿಯ ಮೇಲೆ ಹಾಕಿ ಬಡಿದಳು. ಅದೊಂದೇ ವಿಷಯದಲ್ಲಿ ಅತ್ತೆಯೊಂದಿಗೆ ವೈಮನಸ್ಸು ಅವಳಿಗೆ. ತೀರ್ಮಾನ ಮಾಡಬೇಕೆಂದಿದ್ದಾಳೆ... ಮಾತನಾಡಲಾಗುತ್ತಿಲ್ಲ. ಗೋಡೆಗಳು ಅಂಟಿದ ಸಾಲುಮನೆಗಳು. ಚಾಳ ಎಂದರೆ ಹಾಗೇ. ಒಬ್ಬರು ಸೀನಿದರೆ ಇಡೀ ಚಾಳಕ್ಕೆ ಗೊತ್ತಾಗುತ್ತದೆ. ದಶಮಿ ತಿಂದು ಮಲಗಿದ ಭಾಗಕ್ಕನಿಗೆ ರಾತ್ರಿ ನಿದ್ದೆ ಹತ್ತಿರ ಸುಳಿಯಲಿಲ್ಲ. ವಾಸಣ್ಣನ ಶ್ರಾದ್ಧ ಎಂದರೆ ಪದ್ಮ ಕೋಪಗೊಳ್ಳುತ್ತಾಳೆ. ಕೊಣ್ಣೂರಲ್ಲಿದ್ದಾಗಲೂ ಅಷ್ಟೇ... “ಪದ್ಮಾ ಕಡಿಗ್ಯಾಗ್ಯಾಳ.